**Akashvani : Bangalore**
**National Bulletin In Kannada**
**15.03.2024 / 19.35 hrs**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**15.03.2024 / 19.35 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಕೇಂದ್ರ ಚುನಾವಣಾ ಆಯೋಗದಿಂದ ನಾಳೆ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟ

೨. ಭೂತಾನ್ ಜೊತೆಗಿನ ಬಹುಮುಖ ಸಹಭಾಗಿತ್ವ ಮುಖ್ಯ- ರಾಷ್ಟ್ರಪತಿ ದ್ರೌಪದಿ ಮುರ್ಮು

೩. ದೇಶದ ಜನತೆಗೆ ಅಭಿವೃದ್ಧಿಯಲ್ಲಿ ನಂಬಿಕೆ ಪ್ರಧಾನಮಂತ್ರಿ ನರೇಂದ್ರ ಮೋದಿ

೪. ಕೇಂದ್ರ ಸರ್ಕಾರದಿಂದ ೨೦೨೪ರ ಸಿನಿಮೆಟೋಗ್ರಾಫ್ ನಿಯಮಾವಳಿ ಅಧಿಸೂಚನೆ

೫. ಆಲ್ ಇಂಗ್ಲೆಂಡ್ ಮುಕ್ತ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್; ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ಸ್‌ನಲ್ಲಿಂದು ಭಾರತದ ಲಕ್ಷ್ಯ ಸೇನ್, ಮಲೇಷಿಯಾದ ಲೀ ಝಿ ಜಿಯಾ ಮುಖಾಮುಖಿ

**<><*<><>*><>**

ಕೇಂದ್ರ ಚುನಾವಣಾ ಆಯೋಗ, ನಾಳೆ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಿದೆ. ದೆಹಲಿಯ ವಿಜ್ಞಾನಭವನದಲ್ಲಿ ಕೇಂದ್ರ ಚುನಾವಣಾ ಆಯೋಗ ನಾಳೆ ಮಧ್ಯಾಹ್ನ ಈ ಬಗ್ಗೆ ಘೋಷಣೆ ಮಾಡಲಿದೆ. ಲೋಕಸಭೆ ಹಾಗೂ ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳ ವೇಳಾಪಟ್ಟಿಯನ್ನು ಆಯೋಗ ಪ್ರಕಟಿಸಲಿದೆ. ಪ್ರಸ್ತುತ ಲೋಕಸಭೆಯ ಅವಧಿ ಜೂನ್ ೧೬ರಂದು ಸಮಾಪನಗೊಳ್ಳಲಿದೆ. ೨೦೧೯ರಲ್ಲಿ ಲೋಕಸಭಾ ಚುನಾವಣೆಗಳು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಏಳು ಹಂತಗಳಲ್ಲಿ ನಡೆದಿದ್ದವು. ಈ ಬಾರಿ ಕೂಡ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಚುನಾವಣೆ ವಿವಿಧ ಹಂತಗಳಲ್ಲಿ ನಡೆಯುವುದೆಂದು ನಿರೀಕ್ಷಿಸಲಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ, ೫೪೩ ಲೋಕಸಭಾ ಕ್ಷೇತ್ರಗಳ ಪೈಕಿ ೩೦೩ ಸ್ಥಾನಗಳಲ್ಲಿ ಜಯ ಸಾಧಿಸಿತ್ತು. ಈ ಬಾರಿ ಆಡಳಿತಾರೂಢ ಬಿಜೆಪಿ, ಇದುವರೆಗೆ ೨೬೭ ಅಭ್ಯರ್ಥಿಗಳ ಉಮೇದುವಾರಿಕೆ ಪ್ರಕಟಿಸಿದೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಲೋಕಸಭಾ ಚುನಾವಣೆಗಾಗಿ ೮೨

ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ.  ಎಡ ಪಕ್ಷ, ಟಿಎಂಸಿ, ಆಮ್‌ಆದ್ಮಿ ಹಾಗೂ ಇನ್ನು ಇತರ ಪಕ್ಷಗಳು ವಿವಿಧ ಲೋಕಸಭಾ ಕ್ಷೇತ್ರಗಳಿಗಾಗಿ ಹೆಸರುಗಳನ್ನು ಪ್ರಕಟಿಸಿವೆ. ಚುನಾವಣೆಗೆ ದಿನಾಂಕ ಪ್ರಕಟವಾದ ದಿನದಿಂದಲೇ ಮಾದರಿ ನೀತಿ ಸಂಹಿತೆ ಜಾರಿಗೆ ಬರುವ ನಿರೀಕ್ಷೆ ಇದೆ. ಈ ಮಧ್ಯೆ, ನೂತನ ಚುನಾವಣಾ ಆಯುಕ್ತರಾಗಿ ನೇಮಕಗೊಂಡಿರುವ ಗ್ಯಾನೇಶ್ ಕುಮಾರ್ ಹಾಗೂ ಸುಖ್‌ಬೀರ್ ಸಿಂಗ್ ಸಂಧು ಅವರು ಇಂದು ಅಧಿಕಾರ ವಹಿಸಿಕೊಂಡರು.

<><*<><>*><>

ಭೂತನ್ ಜೊತೆಗಿನ ಬಹುಮುಖ ಸಹಭಾಗಿತ್ವ ಮುಖ್ಯವಾಗಿದ್ದು, ಆದನ್ನು ಭಾರತ ಅಪಾರವಾಗಿ ಗೌರವಿಸುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಅವರು ರಾಷ್ಟ್ರಪತಿ ಭವನದಲ್ಲಿ ಇಂದು ಭೂತಾನದ ಪ್ರಧಾನಿ ದಾಶೋ ಶೆರಿಂಗ್ ತೊಬಗೆಯ್ ತಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ  ಮಾತನಾಡಿದರು.  ಇಂಧನ ಸಹಕಾರ, ಅಭಿವೃದ್ಧಿ ಸಹಭಾಗಿತ್ವ, ಜನರ ನಡುವಿನ ಸಂಬಂಧ, ವಾಣಿಜ್ಯ ಮತ್ತು ಬಂಡವಾಳ ಹೂಡಿಕೆ ವಿಷಯದಲ್ಲಿ ಉಭಯ ದೇಶಗಳ ಪಾಲುದಾರಿಕೆ ಮಹತ್ವದ್ದಾಗಿದೆ. ಎರಡೂ ರಾಷ್ಟ್ರಗಳು ನಿಕಟ, ವಿಶಿಷ್ಟ ಸಂಬಂಧ ಹೊಂದಿವೆ. ಬೌದ್ಧ ಧರ್ಮದ ಧಾರ್ಮಿಕ ಪರಂಪರೆಯನ್ನು ಎರಡೂ ದೇಶಗಳು ಹಂಚಿಕೊಂಡಿವೆ, ಭೂತಾನ್, ಭಾರತವನ್ನು ನಂಬಲರ್ಹ ಮಿತ್ರ ದೇಶವನ್ನಾಗಿ ಪರಿಗಣಿಸಬಹುದಾಗಿದೆ ಎಂದರು. ಭೂತಾನ್ ಜನತೆಯ ಸಾಮಾಜಿಕ ಆರ್ಥಿಕ ಸಮೃದ್ಧಿಗಾಗಿ ಹೆಚ್ಚಿನ ಸಹಕಾರ, ಸಹಭಾಗಿತ್ವ ಹೊಂದಲು ಭಾರತಕ್ಕೆ ಹೆಮ್ಮೆ ಇದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

<><*<><>*><>

ದೇಶದಲ್ಲಿ ಆಡಳಿತಾರೂಡ ಬಿಜೆಪಿಗೆ ಬೆಂಬಲ ನೀಡುವ ಅಲೆ ತಮಿಳುನಾಡಿನಲ್ಲಿ ಆರಂಭವಾಗಿದೆ ಎಂದು ಹಿರಿಯ ಬಿಜೆಪಿ ಧುರೀಣ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು, ಕನ್ಯಾಕುಮಾರಿಯ ಅಗಸ್ಥೀಶ್ವರಂನಲ್ಲಿಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ, ದೇಶದ ಜನತೆಗೆ ರಾಷ್ಟ್ರವನ್ನು ಅಭಿವೃದ್ಧಿಪಡಿಸುವಲ್ಲಿ ನಂಬಿಕೆ ಇದೆ. ಆದರೆ, ಐಎನ್‌ಡಿಐ ಮೈತ್ರಿಕೂಟದ ಪಕ್ಷಗಳು ಜನರ ಕಲ್ಯಾಣವನ್ನು ಎಂದೂ ಪರಿಗಣಿಸಿಲ್ಲ ಎಂದು ಆಪಾದಿಸಿದರು.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು ದಕ್ಷಿಣ ಭಾರತದ ಕೆಲವು ರಾಜ್ಯಗಳಿಗೆ ಭೇಟಿ ನೀಡಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಕರ್ನಾಟಕಕ್ಕೆ ಭೇಟಿ ನೀಡಲಿದ್ದಾರೆ. ಪ್ರತ್ಯೇಕ ದಿನಗಳಂದು

ಎರಡು ಸಾರ್ವಜನಿಕ ರ್‍ಯಾಲಿಗಳಲ್ಲಿ ಭಾಗಿಯಾಗಿ ಜನರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಾಳೆ ಕಲ್ಬುರ್ಗಿಯಲ್ಲಿ ಮತ್ತು ಮಾರ್ಚ್ ೧೮ ರಂದು ಶಿವಮೊಗ್ಗದಲ್ಲಿ ಪ್ರಧಾನಿಯವರು ಸಾರ್ವಜನಿಕ ರ್‍ಯಾಲಿಗಳಲ್ಲಿ ಭಾಗಿಯಾಗುವರು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಶಾಸಕ ಸುನೀಲ್ ಕುಮಾರ್ ಇಂದು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ಬಿಜೆಪಿ ನಾಯಕರು ಮುಂದಿನ ದಿನಗಳಲ್ಲಿ ಕರ್ನಾಟಕಕ್ಕೆ ಭೇಟಿ ನೀಡಲಿದ್ದಾರೆ ಎಂದು ಸುನೀಲ್ ಕುಮಾರ್ ತಿಳಿಸಿದ್ದಾರೆ.

<><*<><>*><>

ಪ್ರಸಾರ ಭಾರತೀಯ ಸದಸ್ಯರು ಮತ್ತು ಅಧ್ಯಕ್ಷರ ಕುರಿತಾದ ಆಯ್ಕೆ ಸಮಿತಿ ಸಭೆ ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ಅಧ್ಯಕ್ಷತೆಯಲ್ಲಿ ಉಪಸಭಾಪತಿ ನಿವಾಸದಲ್ಲಿ ಇಂದು ನಡೆಯಿತು. ಭಾರತದ ಪತ್ರಿಕಾಮಂಡಳಿಯ ಅಧ್ಯಕ್ಷ, ನ್ಯಾಯಮೂರ್ತಿ ರಂಜನ್ ಪ್ರಕಾಶ್ ದೇಸಾಯಿ ಮತ್ತು ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜೂ ಸಭೆಯಲ್ಲಿ ಉಪಸ್ಥಿತರಿದ್ದರು.

<><*<><>*><>

ಕೇಂದ್ರ ಸರ್ಕಾರ, ಚಲನಚಿತ್ರಗಳಿಗೆ ಪ್ರಮಾಣಪತ್ರ ನೀಡುವ ೨೦೨೪ರ ಸಿನಿಮೆಟೋಗ್ರಾಫ್ ಪ್ರಮಾಣಪತ್ರ ನಿಯಮಾವಳಿಯನ್ನು ಅಧಿಸೂಚಿಸಿದೆ. ಸಾರ್ವಜನಿಕ ಪ್ರದರ್ಶನಕ್ಕಾಗಿ ಸಿನಿಮಾ ಪ್ರಮಾಣಪತ್ರ ನೀಡಿಕೆಯ ಸಂಪೂರ್ಣ ಪ್ರಕ್ರಿಯೆಯನ್ನು ಸಮಗ್ರವಾಗಿ ಸಮಕಾಲಿಕವಾಗಿ ಸುಧಾರಿಸುವ ನಿಯಮಾವಳಿ ಇದಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯ ತಿಳಿಸಿದೆ. ಭಾರತೀಯ ಚಿತ್ರೋದ್ಯಮ ಜಗತ್ತಿನ ಅತಿದೊಡ್ಡ ಉದ್ಯಮಗಳಲ್ಲಿ ಒಂದಾಗಿದ್ದು, ವಾರ್ಷಿಕ ೪೦ ಭಾಷೆಗಳಲ್ಲಿ ೩ ಸಾವಿರಕ್ಕೂ ಅಧಿಕ ಚಿತ್ರಗಳನ್ನು ನಿರ್ಮಿಸಲಾಗುತ್ತಿದೆ. ಚಿತ್ರರಂಗದಲ್ಲಿ ಹೊರಹೊಮ್ಮುತ್ತಿರುವ ತಂತ್ರಜ್ಞಾನ ಗಮನದಲ್ಲಿರಿಸಿಕೊಂಡು ಡಿಜಿಟಲ್ ಯುಗಕ್ಕೆ ಸರಿಯಾದ ಚಿತ್ರ ಪ್ರಮಾಣೀಕರಣ ಪ್ರಕ್ರಿಯೆಯನ್ನು ಆಧುನೀಕರಿಸುವುದು ಹೊಸ ನಿಯಮಾವಳಿಯ ಉದ್ದೇಶವಾಗಿದೆ. ಚಿತ್ರ ಪ್ರಮಾಣೀಕರಣ ಪ್ರಕ್ರಿಯೆಗಾಗಿ ತೆಗೆದುಕೊಳ್ಳುತ್ತಿರುವ ವೇಳೆಯಲ್ಲಿ ಗಣನೀಯ ಕಡಿತ ಹಾಗೂ ಸಂಪೂರ್ಣ ಡಿಜಿಟಲ್ ಪ್ರಕ್ರಿಯೆ ಅಳವಡಿಕೆ ಈ ನಿಯಮಾವಳಿಯ ಗುರಿಯಾಗಿದೆ.

<><*<><>*><>

ಗ್ರಾಹಕರಿಗೆ ೨೨ ಅಗತ್ಯ ಸಾಮಗ್ರಿಗಳ ಬೆಲೆ ಬಗ್ಗೆ ಮಾಹಿತಿ ನೀಡುವ ಬೆಲೆ ನಿಗಾ ವ್ಯವಸ್ಥೆಗೆ, ಕೇಂದ್ರ ಗ್ರಾಹಕ ವ್ಯವಹಾರ ಖಾತೆ ಸಚಿವ ಪಿಯುಷ್ ಗೋಯಲ್ ಮುಂಬೈಯಲ್ಲಿಂದು ಚಾಲನೆ ನೀಡಿದರು. ೩೪ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಥಾಪಿಸಲಾದ ೫೫೦ ಬೆಲೆ ನಿಗಾ ಕೇಂದ್ರಗಳ ಮೂಲಕ ಈ ವ್ಯವಸ್ಥೆ, ಅಗತ್ಯ ಸಾಮಗ್ರಿಗಳ ಸಗಟು ಮತ್ತು ಚಿಲ್ಲರೆ ಬೆಲೆಗಳ ಬಗ್ಗೆ ನಿಗಾ ವಹಿಸಲಿದೆ. ಸಚಿವರು ಇದೇ ಸಂದರ್ಭದಲ್ಲಿ ಕಾನೂನು ಮಾಪನದ ಅಂತಾರಾಷ್ಟ್ರೀಯ ಸಂಸ್ಥೆ-ಓಐಎಂಎಲ್ ಪದ್ಧತಿಯ ದೇಶದ ಮೊದಲ ಅನುಮೋದನಾ ಪ್ರಮಾಣ ಪತ್ರವನ್ನು ಈ ಸಂದರ್ಭದಲ್ಲಿ ನೀಡಿದರು. ಸಚಿವರು, ಕೇಂದ್ರೀಯ ಗ್ರಾಹಕ ರಕ್ಷಣಾ ಪ್ರಾಧಿಕಾರದ ವೆಬ್ ಸೈಟ್‌ಗೆ ಚಾಲನೆ ನೀಡಿದರು ಹಾಗೂ ಸಮಗ್ರ ವಿದ್ಯುತ್ ಪ್ರಸರಣಾ ಮಾರ್ಗದ ಉಪಕರಣ ಪರೀಕ್ಷಾ ಪ್ರಯೋಗಾಲಯವನ್ನೂ ಕೂಡ ವರ್ಚುವಲ್ ಮೂಲಕ ಉದ್ಘಾಟಿಸಿದರು.

<><*<><>*><>

ವಿದೇಶಿ ನೇರ ಬಂಡವಾಳ ಹೂಡಿಕೆ ಹರಿವು ಕುರಿತಾದ ಆಸಕ್ತಿ ಸದ್ಯ ಅತ್ಯುನ್ನತ ಮಟ್ಟದಲ್ಲಿದ್ದು, ಇದು ಇನ್ನೂ ಬೆಳೆಯಲಿದೆ ಎಂದು ಕೇಂದ್ರ ಹಣಕಾಸು ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಅವರು, ಖಾಸಗಿ ಸುದ್ದಿ ವಾಹಿನಿಯ ಚರ್ಚೆಯೊಂದರಲ್ಲಿ ಪಾಲ್ಗೊಂಡು ಮಾತನಾಡಿ, ಹಣಕಾಸು ಕ್ಷೇತ್ರದಲ್ಲಿನ ಸುಧಾರಣೆ ವಿಚಾರದಲ್ಲಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ನಡುವೆ ಅತಿ ಹೆಚ್ಚಿನ ಸಹಕಾರದ ಅಗತ್ಯವಿದೆ ಎಂದರು. ಜನರಿಗೆ ಮೂಲಸೌಕರ್ಯ ಒದಗಿಸುವ ಮೂಲಕ ಅವರನ್ನು ಹೆಚ್ಚು ಸಶಕ್ತರನ್ನಾಗಿಸಬಹುದು. ಈ ನಿಟ್ಟಿನಲ್ಲಿ ಕುಟುಂಬದ ಉಳಿತಾಯ ಹೆಚ್ಚಿಸಲು ಸರ್ಕಾರ ವಿವಿಧ ಯೋಜನೆಗಳ ಮೂಲಕ ಅವರಿಗೆ ನೆರವಾಗುತ್ತಿದೆ ಎಂದು ಹೇಳಿದರು. ಚುನಾವಣಾ ಬಾಂಡ್ ಯೋಜನೆ ಕುರಿತ ಪ್ರಶ್ನೆಗಳಿಗೆ ಉತ್ತರಿಸಿದ ನಿರ್ಮಲಾ ಸೀತಾರಾಮನ್, ಮಾಹಿತಿ ಬಿಡುಗಡೆ ನಂತರ ಅನೇಕ ಪರಿಕಲ್ಪನೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು. ಚುನಾವಣಾ ಬಾಂಡ್ ಯೋಜನೆಯ ಅಪರಿಪೂರ್ಣತೆ ಪ್ರಸ್ತಾಪಿಸಿ ರಾಜಕೀಯ ಪಕ್ಷಗಳಿಗೆ ಹಣ ಒದಗಿಸುವ ಹಿಂದಿನ ವ್ಯವಸ್ಥೆಗಳಿಗಿಂತ ಇದು ಉತ್ತಮದ್ದಾಗಿದೆ ಹಾಗೂ ಬಿಳಿ ಹಣದ ವರ್ಗಾವಣೆ ಖಾತರಿಪಡಿಸುತ್ತದೆ ಎಂದರು.

<><*<><>*><>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ನವದೆಹಲಿಯಲ್ಲಿಂದು ನವ್‌ಸೇನಾ ಭವನವನ್ನು ಉದ್ಘಾಟಿಸಿದರು. ಸಿಡಿಎಸ್ ಜನರಲ್ ಅನಿಲ್ ಚೌಹಾಣ್, ನೌಕಾಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ಆರ್.ಹರಿಕುಮಾರ್, ಡಿ.ಆರ್.ಡಿ.ಓ ಅಧ್ಯಕ್ಷ ಡಾ.ಸಮೀರ್ ವಿ ಕಾಮಂತ್ ಈ ಸಂದರ್ಭದಲ್ಲಿ

ಉಪಸ್ಥಿತರಿದ್ದರು. ದೆಹಲಿಯ ಕಂಟೋನ್ಮೆಂಟ್ ಪ್ರದೇಶದಲ್ಲಿ ನೂತನ ನವ್‌ಸೇನಾ ಭವನವನ್ನು ನಿರ್ಮಿಸಲಾಗಿದೆ.

<><*<><>*><>

ಪೌರತ್ವ ತಿದ್ದುಪಡಿ ಕಾಯ್ದೆ ದೇಶದ ಆಂತರಿಕ ವಿಚಾರವಾಗಿದೆ. ಇದು ಮಾನವ ಹಕ್ಕುಗಳ ಬಗ್ಗೆ ಭಾರತಕ್ಕೆ ಇರುವ ಬದ್ಧತೆ ಮತ್ತು ಒಳಗೊಳ್ಳುವ ಪರಂಪರೆಯ ಕ್ರಮವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಸಚಿವಾಲಯದ ವಕ್ತಾರ ರಣದೀರ್ ಜೈಸ್ವಾಲ್ ಅವರು, ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಕಾಯ್ದೆ ಜನರಿಗೆ ಪೌರತ್ವ ನೀಡುವ ಕ್ರಮವಾಗಿದೆಯೆ ಹೊರತು, ಯಾರ ಪೌರತ್ವವನ್ನು ಕಸಿದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

<><*<><>*><>

ಬ್ರಿಟನ್ ಸರ್ಕಾರ ತೀವ್ರವಾದ ಕುರಿತು ಹೊಸ ವ್ಯಾಖ್ಯೆ ಅಧಿಸೂಚಿಸಿದೆ. ಇದರ ಪ್ರಕಾರ ಕೆಲವು ಗುಂಪುಗಳು ಸರ್ಕಾರೀ ಅಧಿಕಾರಿಗಳನ್ನು ಭೇಟಿ ಮಾಡುವುದು ಹಾಗೂ ಸರ್ಕಾರದಿಂದ ನಿಧಿ ಪಡೆಯುವುದನ್ನು ತಡೆಗಟ್ಟಲಾಗುತ್ತದೆ. ಇತರರ ಮೂಲಭೂತ ಹಕ್ಕು ಮತ್ತು ಸ್ವಾತಂತ್ರ್ಯ ಕಡೆಗಣಿಸುವ ಉದ್ದೇಶ ದ ಹಿಂಸೆ, ದ್ವೇಷ, ಅಸಹನೆ ಆಧರಿತ ಯಾವುದೇ ತತ್ವ, ಆದರ್ಶಗಳ ಪ್ರವರ್ತನೆಯನ್ನು ತೀವ್ರವಾದ ಎಂದು ನಿಖರವಾಗಿ ವ್ಯಾಖ್ಯಾನಿಸಲಾಗಿದೆ.

<><*<><>*><>

ಟರ್ಕಿಯ ಕಾನಕಲ್ಲೆ ವಾಯುವ್ಯ ಪ್ರದೇಶದಲ್ಲಿಂದು ಸಂಭವಿಸಿದ ದೋಣಿ ದುರಂತದಲ್ಲಿ ಕನಿಷ್ಠ ೮ ಜನ ವಲಸಿಗರು ಮೃತಪಟ್ಟಿದ್ದಾರೆ. ಇದುವರೆಗೆ ನಾಲ್ವರನ್ನು ಸಂರಕ್ಷಿಸಲಾಗಿದೆ. ಉಳಿದವರಿಗಾಗಿ ಶೋಧಕಾರ್ಯ ನಡೆದಿದೆ ಎಂದು ಕಾನಕಲ್ಲೆ ಗವರ್ನರ್ ಇಲ್‌ಹಮಿ ಅಕ್ತಾಸ್ ತಿಳಿಸಿದ್ದಾರೆ. ದೋಣಿಯಲ್ಲಿ ಎಷ್ಟು ಜನರಿದ್ದರು ಎಂಬುದು ಇನ್ನು ತಿಳಿದುಬಂದಿಲ್ಲ.

<><*<><>*><>

ಬರ್ಮಿಂಗ್‌ಹ್ಯಾಮ್‌ನಲ್ಲಿ ಇಂದು ರಾತ್ರಿ ನಡೆಯಲಿರುವ ಆಲ್ ಇಂಗ್ಲೆಂಡ್ ಮುಕ್ತ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ಸ್‌ನಲ್ಲಿ ಭಾರತದ ಲಕ್ಷ್ಯ ಸೇನ್, ಮಲೇಷಿಯಾದ ಲೀ ಝಿ ಜಿಯಾ ಅವರನ್ನು ಎದುರಿಸಲಿದ್ದಾರೆ. ಕಾಮನ್‌ವೆಲ್ತ್ ಕ್ರೀಡೆಯ ಚಿನ್ನ ಪದಕ ವಿಜೇತರಾಗಿರುವ ಲಕ್ಷ್ಯ ಸೇನ್, ನಿನ್ನೆ ರಾತ್ರಿ ನಡೆದ ಹಣಾಹಣಿ ಪಂದ್ಯದಲ್ಲಿ ಡೆನ್ಮಾರ್ಕಿನ ಆಂಡರ್ಸ್ ಆಂಟೊನ್ಸೆನ್ ಅವರನ್ನು ೨೪-೨೨, ೧೧-೨೧, ೨೧-೧೪ ಅಂತರದಲ್ಲಿ ಪರಾಭವಗೊಳಿಸಿದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಿಗ್ಗೆ ೬.೦೫ ಕ್ಕೆ <>*><>**